## ಮಧುಕರ್ ಶೆಟ್ಟಿ

# ಮರೆತೇನೆಂದರೆ ಮರೆಯಲಿ ಹ್ಯಾಂಗ..




**ಮಧುಕರ್ ಶೆಟ್ಟಿ ರಾಜ್ಯದ ಪೊಲೀಸ್ ಇಲಾಖೆ ಕಂಡ ಪ್ರಾಮಾಣಿಕ ಹಾಗೂ ಮಾದರಿ ಅಧಿಕಾರಿಗಳಲ್ಲೊಬ್ಬರು. ಸಾರ್ವಜನಿಕ ಸೇವೆಯಲ್ಲೇ ವೈಯಕ್ತಿಕ ಸುಖವನ್ನು ಕಂಡ ಸರಳಜೀವಿ. ಕಳೆದ ಡಿ. 28ರಂದು ಎಚ್1ಎನ್1 ಸೋಂಕಿಗೆ ಬಲಿಯಾದ ಈ ಅಧಿಕಾರಿ ಹೊಸ ತಲೆಮಾರಿನ ತರುಣ ತರುಣಿಯರಿಗೆ ಅನುಕರಣೀಯ ಮಾದರಿ.**

■ **ಡಾ. ಎಸ್.ಗುರುಮೂರ್ತಿ**

ಮಧುಕರ್ ಶೆಟ್ಟಿ ಅವರ ವ್ಯಕ್ತಿತ್ವ ಬಲು ವಿಶಿಷ್ಟ ಹಾಗೂ ಆಕರ್ಷಣೀಯ. ಆರು ಅಡಿಗೂ ಮೀರಿದ ಆಜಾನುಬಾಹು, ಸ್ಫುರದ್ರೂಪಿ, ಸದಾ ಹೂನಗೆ ಬೀರುತ್ತಿದ್ದ ಚೆಲುವ, ಪ್ರತಿಭಾವಂತ, ನಿಗರ್ವಿ, ಕಪಟತನವಿಲ್ಲದ ಮುಖಚರ್ಯೆ, ಗಾಂಭೀರ್ಯವನ್ನೇ ಮೈಹೊತ್ತು ಪೊಲೀಸ್ ಸಮವಸ್ತ್ರದಲ್ಲಿ ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿ ಬರುತ್ತಿದ್ದರೆ ಅವರೊಬ್ಬ ಖಡಕ್ ಪೊಲೀಸ್ ಅಧಿಕಾರಿಯೆಂದು ದೂರದಿಂದಲೇ ಗುರುತಿಸಬಹುದಾಗಿತ್ತು. ಸರಳತೆ, ಮಾನವೀಯತೆ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿದ್ದ ನೇರ ನಿಷ್ಠುರವಾದಿ.